KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ರಂಗನಾಥ.ಡಿ.ಕೆ. | **ಪಿ.ಡಬ್ಲ್ಯೂ** | 06 |
| **ತಂದೆಯ ಹೆಸರು** | ಕೃಷ್ಣೇಗೌಡ | **ಸಿ.ಡಬ್ಲ್ಯೂ** | 11 |
| **ವಯಸ್ಸು** | 32 ವರ್ಷ | | |
| **ಉದ್ಯೋಗ** | ಹೆಚ್.ಡಿ.ಎಫ್.ಸಿ. ಬ್ಯಾಂಕಿನಲ್ಲಿ ಮ್ಯಾನೇಜರ್ | | |
| **ವಾಸಸ್ಥಳ** | ಶಿವಮೊಗ್ಗ | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿಃ 14-11-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಈಗ್ಗೆ 4 ವರ್ಷಗಳಿಂದ ನಾನು ಶಿವಮೊಗ್ಗದ ಹೆಚ್.ಡಿ.ಎಫ್.ಸಿ. ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಸದರಿ ಬ್ಯಾಂಕಿನ ಮುಖ್ಯ ಶಾಖೆ ಮುಂಬೈನಲ್ಲಿದ್ದು, ಪ್ರಾದೇಶಿಕ ಕಛೇರಿ ಶಿವಮೊಗ್ಗದಲ್ಲಿದೆ. ಸದರಿ ಬ್ಯಾಂಕಿನಲ್ಲಿ ನನ್ನ ವ್ಯಾಪ್ತಿಗೆ, ದಾವಣೆಗೆರೆ ಜಿಲ್ಲೆಯ ಹರಿಹರ ಮತ್ತು ಹೊನ್ನಳ್ಳಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಹರಪ್ಪನಹಳ್ಳಿ ಚಿಕ್ಕಮಗಳೂರಿನಲ್ಲಿ ತರೀಕೆರೆ ಮತ್ತು ಕಡೂರು ಬರುತ್ತದೆ.**

2. **ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಕಾಣುತ್ತಿರುವ**

ಆರೋಪಿ ನನಗೆ ಗೊತ್ತು. ಚಾಸಾ.12 ಗೊತ್ತು. ಆರೋಪಿ ನಮ್ಮ ಬ್ಯಾಂಕಿನಿಂದ ರೂ.6 ಲಕ್ಷ ಹಣವನ್ನು ಸಾಲ ಪಡೆದಿದ್ದರು, ಅದಕ್ಕೆ ಆತನ ತಂದೆ **Co-obligant** ಆಗಿದ್ದರು. ಸಾಲದ ಮೊದಲ ಕಂತು ದಿಃ 04-10-2020 ಕ್ಕೆ ಇದ್ದು, ಸದರಿ ಸಾಲದ ಕಂತನ್ನು ಕಟ್ಟಿರಲಿಲ್ಲ. ಕಂತನ್ನು ಕಟ್ಟದಿದ್ದಾಗ ನಾನು ಮತ್ತು ಚಾಸಾ.12 ರವರು ಆರೋಪಿಯ ಮನೆಗೆ ವಿಚಾರಿಸಲು ಹೋಗಿದ್ದೆವು. ಅದೇ ತಿಂಗಳಲ್ಲಿ ಕಟ್ಟುತ್ತೇನೆ ಎಂದು ಆರೋಪಿ ಹೇಳಿದ್ದರು.

3. ಆದಾದ ಒಂದು ತಿಂಗಳ ನಂತರ ಸಖರಾಯಪಟ್ಟಣ ಪೊಲೀಸ್ ಠಾಣೆಯಿಂದ ಫೋನ್ ಮಾಡಿ, ಆರೋಪಿ ಸಾಲ ಪಡೆದ ಬಗ್ಗೆ ನನ್ನನ್ನು ವಿಚಾರಿಸಿದಾಗ ನಾನು ಸಾಲ ಪಡೆದ ಬಗ್ಗೆ ತಿಳಿಸಿರುತ್ತೇನೆ. ನಂತರ ಪೊಲೀಸರು ಆರೋಪಿಯು ಆತನ ತಂದೆಯನ್ನು ಕೊಲೆ ಮಾಡಿದ್ದಾಗಿ ವಿಷಯ ಗೊತ್ತಾ ಎಂದು ಕೇಳಿದ್ದು, ನಾನು ಇಲ್ಲ ಎಂದು ಹೇಳಿರುತ್ತೇನೆ. ನಾನು ಈ ಪ್ರಕರಣದ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 04-04-2020 ರಂದು ಖಾತೆ ಸಂಖ್ಯೆಃ 84067993 ರಲ್ಲಿ ರೂ.5,68,7621- ಸಾಲ ಪಡೆದಿದ್ದು ಅರ್ಧ ವರ್ಷಕ್ಕೊಮ್ಮೆ ರೂ.84,762/- ಕಟ್ಟುವಂತೆ ಆರೋಪಿಗೆ ತಿಳಿಸಿರುತ್ತೇವೆ ಎಂದರೆ ಸರಿ. ಸದರಿ ಕಂತು ಕಟ್ಟದಿದ್ದಾಗ, ದಿಃ 11-01-2021 ರಂದು ನಾನು ಮತ್ತು ಚಾಸಾ.12 ರವರು ಕಂತು ಕಟ್ಟದಿದ್ದವರನ್ನು ಭೇಟಿ

ಮಾಡಲೆಂದು ಗ್ರಾಮಗಳಿಗೆ ಹೋಗುವಾಗ, ಆರೋಪಿಯನ್ನು ಭೇಟಿ ಮಾಡಲು ಅವರ ಊರಿನ ರಸ್ತೆಯಲ್ಲಿ ಹೋಗುವಾಗ ಮಧ್ಯಾಹ್ನ 12 ಗಂಟೆಗೆ ಆತನ ತಂದೆ ಸಿಕ್ಕಿ ವಿಷಯ ತಿಳಿಸಿ ಕಂತು ಕಟ್ಟುವಂತೆ ಹೇಳಿದಾಗ ಅವರು ಆರೋಪಿಗೆ ತಿಳಿಸುವಂತೆ ಹೇಳಿದಾಗ ನಾವು ನಮಗೆ ಸಮಯ ಇಲ್ಲ ನೀವೆ ತಿಳಿಸಿ ಎಂದು ಹೇಳಿ ಹೋದೆವು ಎಂದರೆ ಸರಿಯಲ್ಲ.

5. ನಂತರ ವಿಚಾರ ತಿಳಿಯಲಾಗಿ, ಆರೋಪಿ ಆತನ ತಂದೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿರುತ್ತಾನೆ ಎಂದು ವಿಷಯ ತಿಳಿಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ದಿಃ 03-02-2021 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.14 ಎಂದು ಗುರುತಿಸಲಾಯಿತು. ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app "**eCourts Services**" from Android or iOS